ಮೈಸೂರ ಗೆಜೆಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ| 26, ಸ್ಯ 1884.

ಸೂ॥ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನಮೆಂಟ್, ರಿಸಿಡೆಂಟರು, ಚೀಫ್ ಜಡ್ಜ್ಗಿರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 1. ತಾರೀಖು 3ನೇ ಏಪ್ರೆಲ್ 1884.

ಮೈಸೂರು ದೇಶದ ರೆಸಿಡೆಂಟರವರು, 1884ನೇ ಇಸವಿ ಜನವರೀ 30ನೇ ಮತ್ತು 24ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೋಸ್ಕರ ಮ್ಯುನಿಸಿಪಲ್ ಕಮ್ಮಿಷನರ್‌ಗಳ ಚುನಾವಣೆಯನ್ನು ಕ್ರಮಪಡಿಸುವ ಬಗ್ಗೆ ಉಂಟಾದ ನಿಬಂಧನೆಗಳಲ್ಲಿ ಇದರಡಿ ಬರುವ ಬದಲಾವಣೆಗಳು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡುತ್ತಾರೆ:—

1. ಪೀಠಿಕೆ ಮತ್ತು 1—2ನೇ ನಿಬಂಧನೆಗಳಿಗೆ ಬದಲಾಗಿ ಇದರಡಿ ಬರುವದನ್ನು ಶೇರಿಸತಕ್ಕದ್ದು:—

" 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪಲ್ ರೆಗ್ಯುಲೇಷನ್ 3 ವ 5ನೇ ಸೆಕ್ಷನಿನ ನಿಯಮಗಳನುಸರಿಸಿ ಮೈಸೂರು
" ದೇಶದ ರೆಸಿಡೆಂಟರವರು ಹುಕುಂ ಮಾಡುವದೇನಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ ಯಕ್ಸ್ ಆಫಿಷಿಯೋ ಯಾನೆ ಉ
" ದ್ಯೋಗಧರ್ಮತಃ ಮೆಂಬರುಗಳಲ್ಲದ ಇತರ ಮ್ಯುನಿಸಿಪಲ್ ಕಮ್ಮಿಷನರುಗಳು ಸ್ಥಳವಿಭಾಗಗಳ ಅನುಸಾರಕ್ಕೆ ಬದಲಾಗಿ ಪ್ರಜೆಗಳ ತರ
" ಗತಿಗಳನುಸರಿಸಿ ಐಯಿಂದೆ ಪೊಕರಮ್ಮಾಡಲ್ಪಡತಕ್ಕದ್ದು; ಮತ್ತು ಉದ್ಯೋಗಗಳು ಖಾಲಿಬಂದಾಗ ಅವುಗಳು ಈ ನಿಬಂಧನೆಗಳನುಸರಿಸಿ
" ಚುನಾವಣೇ ಮೂಲಕ ಭರ್ತೀಮಾಡಲ್ಪಡತಕ್ಕದ್ದು.

2. "ಇದರಡಿ ಕಂಡ ನಿಬಂಧನೆಗಳಿಂದ ಇರಾದೆ ಕೊಡುವದಕ್ಕೆ ಅರ್ಹರಾದ ಸಿವಿಲ್ ವ ಮಿಲಿಟೇರಿ ಸ್ಟೇಷನಿನ ತಮಾಂ ಪ್ರಜೆಗಳೂ
" ಇದರಡಿ ಕಂಡ ಮೂರು ತರಗತಿಗಳ ಪೈಕಿ ಬಂದರಲ್ಲಿ ದಾಖಲ್ಮಾಡಲ್ಪಟ್ಟು ಅಂಥಾ ಪ್ರತಿ ತರಗತಿಯ ಇರಾದೆದಾರರೂ ಈ ಕೆಳಗಿನ ದಾಮೂ
" ಷಾಯಿ ಪ್ರಕಾರ ಅವರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಚುನಾಯಿಸತಕ್ಕದ್ದು.

ತರಗತಿಯ ಹೆಸರು.		ಪ್ರತಿನಿಧಿಗಳ ಸಂಖ್ಯೆ.
(1)	ಯೂರೋಪಿಯ್ಯನ್ ವ ಯೂರೇಷಿಯ್ಯನ್ನರು ..	6
(2)	ಮಹಮ್ಮದೀಯರು ..	4
(3)	ಹಿಂದೂ ವ ಇತರರು ..	8
		18 "

(2) 6ನೇ ರೂಲಿನ (ಬಿ) ಕ್ಲಾಜಿನ ಪಕ್ಕದಲ್ಲಿ ನಮೂದ್‌ಮಾಡಲ್ಪಟ್ಟ "ಮನೆಗಳು, ಕಟ್ಟಗಳು, ಅಥವಾ ಜಮೀನುಗಳು ಇವುಗಳ ಮೇಲೆ ವಟ್ಟುಕೆಲಸಗಳಿಗಾಗಿಯಾಗಲಿ, ಬೆಳಕು ಔಂಟುಮಾಡುವ ಬಗ್ಗೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ ಅವುಗಳ ಸಾಲೀ ಯಾನಾ ಹುಟ್ಟುವಳೀ ಪ್ರಕಾರ ತೆರಿಗೆಗಳು" ಯಂಬ ಮಾತುಗಳು ಬಿಟ್ಟು ಬಿಡಲ್ಪಡತಕ್ಕದ್ದು.

(3) 7ನೇ ರೂಲ್‌ನಲ್ಲಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗಳಿಗೆ ಸೇರಿಯಿರುತ್ತಾನೊ ಅಂಥಾ ತರಗತಿಗಳ" ಯಂಬ ಮಾತುಗಳಿಗೆ ಬದಲಾಗಿ "ಖಾಲಿಪಡಿಸಿದ ಕಮ್ಮಿಷ್ಕರು ಯಾವ ತರಗತಿಗೆ ಪ್ರತಿನಿಧಿಯಾಗಿದ್ದನೊ ಅಂಥಾ ತರಗತಿಯ" ಯಂಬ ಮಾತುಗಳು ಸೇರಿಸತಕ್ಕದ್ದು.

(4) 9ನೇ ರೂಲ್‌ನಲ್ಲಿ "ಭರ್ತಿಯಾಗತಕ್ಕ" ಯಂಬ ಮಾತಿನ ಆಚೆಗೆ "ಆತನು ಸೇರಿರತಕ್ಕ ತರಗತಿಯ ಪ್ರತಿನಿಧಿಗಳಲ್ಲಿ" ಯಂಬ ಮಾತುಗಳು ಸೇರಿಸತಕ್ಕದ್ದು.

ಹುಕ್ಕುಂ ಬಮೋಜೀಬ

ಹೆಚ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 50. ತಾರೀಖು 19ನೇ ಏಪ್ರೆಲ್ 1884.

ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮಾಜೆ ಅರಕಲ್‌ಗೂಡು ತಾಲ್ಲೂಕಿನ ಭಾಗವಾಗಿದ್ದು ಈಚಿಗೆ ಮೈಸೂರು ಡಿಸ್ಟ್ರಿಕ್ಟಿನ ಯಡಕೊರೆ ತಾಲ್ಲೂಕಿಗೆ ವರ್ಗವಾಡಲ್ಪಟ್ಟಿರುವ 78 ಸರಕಾರೀ ಗ್ರಾಮಗಳ ರಿವಿನ್ಯೂ ಸರ್ವೆ ಜಮಾಬಂದಿಯು, 1884ನೇ ಇಸವಿ ಮೇ ಗುರ್ತಿಗೆ, ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ಯಾಯೆಟ್,
ಸೂ॥ ರೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

ಫಿನಾರ್ಷಿಯೆಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಿನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಛೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಪ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ನೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟುದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಯ್ ಫಿ: ಯೇನೂ ಚಾರ್ಜಿ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ,
ಕಾಂಪ್ಟ್ರೋಲರ್.